Reg no KRN 12 - For Influential Pubheity - 22-11-76

ಸ್ವರ್ಣ ಮಹೋತ್ಸವ ನೆರವೇರಿತು ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 5 ಪೈಸೆ

ಸಬರಮತ್ತೆನಲ್ಲಿ ಯಾತ್ರಾರ್ಥಿಗಳಿಗೆ ಸೌಕರ್ಯ

ಕೊಟ್ಟಾಯಂ — ಈ ಬಾರಿ ಶಬರಮಲೈಗೆ ಭೇಟಿ ಕೊಡುವ ಯಾತ್ರಾರ್ಥಿಗಳಿಗೆ ರೂ. 23 ಲಕ್ಷ ಖರ್ಚಿನ ಅನೇಕಾನೇಕ ಸೌಕರ್ಯಗಳು ಸಿದ್ಧವಾಗುವುವು.

○

ರೈಸ್ ಆಫ್ ಇಸ್ಲಾಂ ಮುಟ್ಟುಗೋಲು

ಭೂಪಾಲ್ — ಲಂಡನ್ನಿನಲ್ಲಿ ಪ್ರಕಟವಾಗಿರುವ ದಿ ರೈಸ್ ಆಫ್ ಇಸ್ಲಾಂ ಪುಸ್ತಕದಲ್ಲಿ ಸಾರ್ವಜನಿಕ ಹಿತಕ್ಕೆ ಧಕ್ಕೆ ಬರುವ ವಿಷಯಗಳಿರುವುದರಿಂದ ಅದನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ.

★

ಆದಾಯ ತೆರಿಗೆ ಅಧಿಕಾರಿಗಳ ದಾಳಿ

ಬೊಂಬಾಯಿ — ಒಟ್ಟಿ ಹಾಗೂ ಸಿದ್ಧವಾದ ಉಡುಪು ವ್ಯಾಪಾರಿ 3 ಸಹೋದರ ಪಾಲುಗಾರಿಕೆಯಿಂದಿರುವ ನಿವಾಸ ಮತ್ತು ವ್ಯಾಪಾರ ಸ್ಥಳದ ಮೇಲೆ ದಾಳಿ ನಡೆಸಿದಾಗ ಅವರು 5 ರಿಂದ 6 ಲಕ್ಷ ರೂಪಾಯಿಗಳ ಬೆಲೆಯ ಭಾರಿ ಆದ ಕಟ್ಟಡ ಕಟ್ಟಿಕೊಂಡಿರುವುದನ್ನು ತಮ್ಮ ಸಂಪತ್ತು ತೆರಿಗೆ ಹೇಳಿಕೆಯಲ್ಲಿ ತಿಳಿಸದಿರುವುದು ಪತ್ತೆ ಆಗಿದೆ. ರೂ 4 ಲಕ್ಷಕ್ಕಿಂತ ಹೆಚ್ಚು ಬೆಲೆ ದಾಸ್ತಾನಿದ್ದರೂ ಕೇವಲ ರೂ 50 ಸಾವಿರದಿಂದ 60 ಸಾವಿರದ ವರೆಗೆ ಕಾಣಿಸಿರುವರು.

★

ಪ್ರಧಾನಿ ಇಂದಿರಾರವರ ಎಚ್ಚರಿಕೆ ನುಡಿ

ಜವಾಹರನಗರ — ಇನ್ನೂ ಅನೇಕ ಹೊರಗಿನ ದೇಶದಲ್ಲಿನ ಮತ್ತು ಶಕ್ತಿಯುತವಾದ ಗುಂಪುಗಳು ಮತ್ತು ವ್ಯಕ್ತಿಗಳು ನಮ್ಮ ಪ್ರಗತಿಯ ರೈಲನ್ನು ಕಂಬಿ ತಪ್ಪಿಸಲು ಇಚ್ಛಿಸಿವೆ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಎಚ್ಚರಿಸಿರುವರು.

★

ಬಾಳೆ ಹಣ್ಣು ರಫ್ತಿನ ಯೋಜನೆ

ಮದರಾಸು — ಬಾಳೆ ಹಣ್ಣು ಮತ್ತು ಹಣ್ಣುಗಳ ರಫ್ತಿನ ಸಂಸ್ಥೆಯು ಈ ವರ್ಷ 3 ಸಾವಿರ ಟನ್ ಬಾಳೆ ಹಣ್ಣುಗಳನ್ನು ರಫ್ತು ಮಾಡಲು ಯೋಜಿಸಿದೆ.

○

ಕೆಂಪು (ರತ್ನದ) ಗಣಿಯ ಪತ್ತೆ

ಶ್ರೀನಗರ — ಜಮ್ಮು ಪ್ರಾಂತ್ಯದ ಪಡ್ಡರ್ ಹತ್ತಿರ ರತ್ನದ ಗಣಿ ಪತ್ತೆ ಆಗಿದೆ.

○

ಮದರಾಸು — ಭಾನುವಾರದ ರೇಸ್‌ನಲ್ಲಿ ರೂ 196612 ಮುಂದಿನ ಭಾನುವಾರಕ್ಕೆ ಮುಂದುವರಿಸಲಾಯಿತು.

ಮಳೆಯಿಂದ ಟ್ರ್ಯಾಕ್ ಸ್ಥಿತಿ ಕೆಟ್ಟು ಬೊಂಬಾಯಿನಲ್ಲಿ ಭಾನುವಾರದ ರೇಸ್ ವಜವಾಯಿತು.

ದಸರಾ ವಸ್ತು ಪ್ರದರ್ಶನ

23 ಸಂಜೆ 6 ಶ್ರೀ ಹೆಜ್ ಟಿ ತಾಂಡವ ಮೂರ್ತಿಯವರಿಂದ ಪಿಟೀಲು ವಾದನ 7 ಚಿತ್ರತಾರೆ ಕುಮಾರಿ ಜಯಕಲಾ ಮತ್ತು ತಂಡದವರಿಂದ ನಾಟಕ – ಅಯ್ಕೆ 24 ಸಂಜೆ 6-45 ಶ್ರೀ ಲಕ್ಷ್ಮೀ ಕಲಾ ನಿಕೇತನದವರಿಂದ ನಾಟಕ – ಸೋತು ಗೆದ್ದವಳು.

★

ಡಿಸೆಂಬರ್ 19 ರ ವರೆಗೆ

ಮೈಸೂರು — ದಸರಾ ವಸ್ತು ಪ್ರದರ್ಶನವು ಡಿಸೆಂಬರ್ 19 ನೇ ತಾರೀಖು ಸಮಾಪ್ತವಾಗುವುದೆಂದು ಪ್ರಧಾನ ಕಾರ್ಯದರ್ಶಿ ಶ್ರೀ ಬಿ ಸಿ ಲಿಂಗಯ್ಯನವರು ತಿಳಿಸಿರುವರು

★

ನೇತ್ರದಾನ

ಜವಾಹರನಗರ — ಶ್ರೀ ಸಂಜಯ ಗಾಂಧಿಯವರು ತಮ್ಮ ನೇತ್ರಗಳನ್ನು ಕುರುಡರಿಗೆ ಉದಾರ ದಾನ ಮಾಡಿದರು ಈ ರೀತಿ ನೂರಾರು ಯುವಕ ಕಾಂಗ್ರೆಸ್ ಸದಸ್ಯರು ಮಾಡಿದರು ಈ ದಾನ ಪ್ರಧಾನಿ ಇಂದಿರಾರವರ 59 ನೇ ಜನ್ಮದಿನೋತ್ಸವಕ್ಕೆ ಅರ್ಪಣೆ ಮಾಡಲಾಗಿದೆ.

★

ಗೌರವ ಪೌರ

ಜಪಾನಿನ 111 ವರ್ಷದ ಸಿಗ್ಗೋಜಿಯೋ ಇಜೂಮಿಯು ಮುಂದಿನ ತಿಂಗಳು ಅವರ ಸ್ವನಗರ ಇಸೆನ್ ಅಲ್ಲಿ ಗೌರವ ಪೌರ ಎಂದು ಸೂಚಿಸಲಾಗುವುದು.

●

ಮೂವರ ದಸ್ತಗಿರಿ

ನವ ದೆಹಲಿ — ರೂ 50000 ಬೆಲೆ ಬಾಳುವ 24 ಕೆ ಜಿ ಹೆರಾಯಿನ್ ಡೆಲ್ಲಿ ಭಾಗದಲ್ಲಿ ಒಂದು ಕಾರ್‌ನಿಂದ ಡೆಲ್ಲಿ ಪೋಲೀಸು ಪತ್ತೇದಾರಿಗಳು ವಶಪಡಿಸಿಕೊಂಡು ಮೂವರನ್ನು ದಸ್ತಗಿರಿ ಮಾಡಿದರು.

ಮಳೆಗಾಗಿ ಆಕಾಶಬುಟ್ಟಿ

ಬಿಜಾಪುರ — ಮಳೆಗಳಿಗಾಗಿ ಒಂದು ತಿಂಗಳ ಕಾಲ ಆಕಾಶಬುಟ್ಟಿ ಜಳವಳವು ಭಾನುವಾರ ಮುಗಿಯಿತು. ಮಳೆಗಾಗಿ ಪ್ರಾರ್ಥನೆ ಸಂದೇಶದ 3-4 ಆಕಾಶಬುಟ್ಟಿಗಳನ್ನು ಸ್ಥಳೀಯ ಆಚಾರ ಧಾನ್ಯ ವರ್ತಕ ಸಂಘ ದಿನವೂ ಕಳುಹಿಸುತ್ತಿತ್ತು. ಮುಕ್ತಾಯದ ದಿನದಂದು 21 ಆಕಾಶಬುಟ್ಟಿಗಳನ್ನು ಹಾರಿಸಲಾಯಿತು

★ ಕರ್ನಾಟಕ ವಾಣಿಜ್ಯ ಸಂಘದ ವಜ್ರ ಮಹೋತ್ಸವ ತಾ|| 26 ರಂದು ಬೆಂಗಳೂರಿನಲ್ಲಿ ನಡೆಯುವುದು.

ಸಂಕ್ಷಿಪ್ತ ಹರಾಜು

ಪ್ರಕಟಣೆ

ನೋಟಿಫಿಕೇಷನ್ ನಂ ಎಒ/ಪಿಪಿ/ಡಿಎಸ್‌ಎ/ಡಿಸ್ಪೋಸಲ್/55/75-76

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೇಲೆ ಕಾಣಿಸಿರುವ ಆಫೀಸಿಗೆ ಸೇರಿದ ಹಳೆಯ ಸಾಮಾನುಗಳನ್ನು ಅಂದರೆ ಉಪಯೋಗಕ್ಕೆ ಬಾರದ ಮರದ ಕುರ್ಚಿ, ಲೋಹದ ಟ್ರಂಕು, ಬೈಸಿಕಲ್, ಫ್ಯಾನ್ ಬೀಗಗಳು ಇತ್ಯಾದಿ 18 ರಖಂ ಸಾಮಾನುಗಳನ್ನು ತಾರೀಖು 7-12-1976 ನೇ ಮಂಗಳವಾರ ಮಧ್ಯಾಹ್ನ 2 ಘಂಟೆ 30 ನಿಮಿಷಕ್ಕೆ ಮೇಲ್ಕಂಡ ಆಫೀಸ್ ಆವರಣದಲ್ಲಿ ಕೆಳಗೆ ಸಹಿ ಮಾಡಿರುವ ಅಥವಾ ಅವರಿಂದ ಅಧಿಕಾರ ಪಡೆದವರ ಎದುರಿನಲ್ಲಿ ಒಹರಂಗ ಹರಾಜು ಮಾಡಲಾಗುವುದು. ಹರಾಜಿನಲ್ಲಿ ಭಾಗ ವಹಿಸಲಿಚ್ಛಿಸುವವರು ಮೊದಲೇ 100 ರೂ (ಒಂದು ನೂರು ರೂಪಾಯಿ) ನಂ ಬಿಕೆಯ ಹಣವಾಗಿ ಪಾವತಿ ಮಾಡಿ ಭಾಗವಹಿಸಬಹುದು.

ಹೆಚ್ಚಿನ ವಿವರಗಳನ್ನು ಆಫೀಸಿನ ವೇಳೆಯಲ್ಲಿ ಬಂದು ತಿಳಿದುಕೊಳ್ಳಬಹುದು.

ಸಹಿ/–
ಉಪ ವ್ಯವಸಾಯ ನಿರ್ದೇಶಕರು,
ಮೈಸೂರು ಜಿಲ್ಲೆ, ಮೈಸೂರು.

ವಿನೋಚನೆ ಮಾಡಲು ಷೇಕ್‌ಖ ಕೇಳಿಕೆ

ಜಮ್ಮು — ರಾಷ್ಟ್ರೀಯ ಸಮ್ಮೇಳನದ ಜನಪ್ರತಿಬಿಡ ಸಭೆಯಲ್ಲಿ ಭಾಷಣ ಮಾಡುತ್ತಾ, ಜಮ್ಮು ಮತ್ತು ಕಾಶ್ಮೀರ ಮುಖ್ಯ ಮಂತ್ರಿ ಶ್ರೀ ಷೇಕ್ ಅಬ್ದುಲ್ಲರವರು ಪಾಕೀಸ್ತಾನದ ಅಧೀನದಲ್ಲಿರುವ ಮತ್ತು ಅದನ್ನು ಹೊಂದಿಕಲು ಪಾಕೀಸ್ತಾನಕ್ಕೆ ನ್ಯಾಯ ಅಥವಾ ನೈತಿಕ ಹಕ್ಕಿಲ್ಲದ ರಾಜ್ಯದ ಭಾಗವನ್ನು ವಿನೋಚನೆ ಮಾಡಲು ಕೇಳಿಕೆ ಹಾಕಿರುವರು

●

ನಿಶೇಧ ಆಜ್ಞೆ ಭಂಗಕ್ಕಾಗಿ ದಸ್ತಗಿರಿ

ನದಿಯಾದ್ — 144 ನೇ ವಿಧಿಯನ್ನು ಭಂಗ ಮಾಡಿ ಸಭೆ ನಡೆಸಿದ್ದಕ್ಕಾಗಿ ಶ್ರೀ ಪಿಲ್ಲೂ ಮೋದಿ ಮತ್ತು ಇತರ 15 ಮಂದಿ ದಸ್ತಗಿರಿ ಮಾಡಲ್ಪಟ್ಟು ಜಾಮೀನಿನ ಮೇಲೆ ಬಿಡುಗಡೆ ಆದರು

○

ಆದಾಯ ಮತ್ತು ಬೆಲೆಗಳ ಹತೋಟಿ ಇರಬೇಕು

ಜವಾಹರನಗರ — ಆದಾಯ ಮತ್ತು ಬೆಲೆಗಳ ಮೇಲೆ ಸಾರ್ವಜನಿಕ ಹತೋಟಿ ಇರಬೇಕೆಂದು, ಬೆಲೆಗಳು ನ್ಯಾಯ ಇಲ್ಲದೆ ಏರಿರುವುದರಿಂದ ಇದಕ್ಕೆ ಪ್ರಸ್ತಪನು ಆದ್ಯತೆ ಕೊಡಬೇಕೆಂದು ಈ ಪರಿಸ್ಥಿತಿ ಹತೋಟಿಯು ಸರ್ಕಾರದ್ದ ಆಧೀನದಲ್ಲಿ ಇರಬೇಕೆಂದು ಪ್ರಧಾನಿ ಇಂದಿರಾರವರು ಎ ಐ ಸಿ ಸಿ ಯಲ್ಲಿ ತಿಳಿಸಿದರು.

★

ಸಂಜಯ ಗಾಂಧಿಯವರ ಕರೆ

ಜವಾಹರನಗರ — ಶ್ರೀ ಸಂಜಯ ಗಾಂಧಿಯವರು ಭಾರಿ ವಿದ್ಯಾರ್ಥಿ ಸಭೆಯಲ್ಲಿ ಮಾತನಾಡುತ್ತಾ, ರಾಷ್ಟ್ರೀಯ ವಿದ್ಯಾರ್ಥಿ ಸಂಘವು ಶಕ್ತಿಯುತವಾದ ವಿದ್ಯಾರ್ಥಿಗಳ ಚಳುವಳಿಯನ್ನು ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಸ್ಥಾಪಿಸಲು ಕರೆ ಕೊಟ್ಟರು.

Rugs, Sweaters & Kashmir Coats

ರಗ್ಗು, ಸ್ವೆಟರು, ಕಾಶ್ಮೀರ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹು ಸ್ಟಾರ್

A Fair Priec Shop in Actual Practice

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು; ಉದಾರತೆಯಿಂದ ಕೂಡಿದೆ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

Contribute Liberally to the National Defence Fund

ವುಡ್‌ಲ್ಯಾಂಡ್ 19 11 76 ರಿಂದ

ಆಪೋಘ ಆರಂಭ

ಬಿಡುಗಡೆ

ಡಾ. ರಾಜಕುಮಾರ್ ಭಾರತಿ ಅಶ್ವತ್ಥ್ ನರಸಿಂಹರಾಜು ಅಭಿನಯ

ಕನ್ನಡ ಕಲರ್

ದಿನ 3 ಪ್ರದರ್ಶನಗಳು

ಅಪೂರ್ವ 19 11 76ರಿಂದ

ಪ್ರೇಮಬಂಧ

ಕಲರ್

ಶೋಭನಬಾಬು ವಾಣಿಶ್ರೀ ಸತ್ಯನಾರಾಯಣ ಅಭಿನಯ

ತೆಲುಗು ಪ್ರತಿ ದಿನ 3 ಪ್ರದರ್ಶನ

SHAKTI

SUDHA

A Superb Tonic

Protect the Cow.

Edited Printed and Published by Dharmapracharanirata M S. Krishna Rao (Proprietor) at the Sarvagna Press Chamarajapuram Mysore 4